# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 740 (786) |
| 2 | ಸದಸ್ಯರ ಹೆಸರು | : | ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) |
| 3 | ಉತ್ತರಿಸಬೇಕಾದ ದಿನಾಂಕ | : | 09-03-2021 |
| 4 | ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಚಾಮರಾಜನಗರದಲ್ಲಿ ಒಳಚರಂಡಿ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆಯೇ? | ಚಾಮರಾಜನಗರ ನಗರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆಯ ಮೊದಲನೇ ಹಂತದ ಕಾಮಗಾರಿ ಡಿಸೆಂಬರ್-2018 ರಲ್ಲಿ ಪೂರ್ಣಗೊಂಡಿರುತ್ತದೆ. |
| ಆ) | ನಗರದ ಎಲ್ಲಾ ಮನೆಗಳಿಗೆ ನೂತನ ಒಳಚರಂಡಿ ಸಂಪರ್ಕ ಕಲ್ಪಿಸದಿರಲು ಕಾರಣಗಳೇನು; | ಚಾಮರಾಜನಗರ ಪಟ್ಟಣದಲ್ಲಿ ಒಟ್ಟು 16,190 ಮನೆಗಳಿದ್ದು, ಇದುವರೆವಿಗೂ 9,610 ಮನೆಗಳಿಗೆ ಒಳಚರಂಡಿ ಸಂಪರ್ಕವನ್ನು ಕಲ್ಪಿಸಲಾಗಿರುತ್ತದೆ. ಉಳಿಕೆ ಮನೆಗಳ ಸಂಪರ್ಕವನ್ನು ಹಂತ ಹಂತವಾಗಿ ಕಲ್ಪಿಸಲಾಗುವುದು.<br><br>ಅಲ್ಲದೇ, ಒಳಚರಂಡಿ ಗೃಹ ಸಂಪರ್ಕವನ್ನು ಪಡೆಯಲು ಸಂಬಂಧಪಟ್ಟ ಮನೆ ಮಾಲೀಕರೆ ಸ್ವಂತ ಖರ್ಚಿನಲ್ಲಿ ಭರಿಸಿಕೊಳ್ಳಬೇಕಾಗಿದ್ದು, ಈಗಾಗಲೇ ನಗರಸಭೆ ವತಿಯಿಂದ ಒಳಚರಂಡಿ ಗೃಹ ಸಂಪರ್ಕ ಪಡೆದುಕೊಳ್ಳಲು ಮನೆ ಮಾಲೀಕರುಗಳಿಗೆ ತಿಳುವಳಿಕೆ ನೋಟೀಸ್ ನೀಡಲಾಗಿದೆ. |
| ಇ) | ನಗರದಲ್ಲಿ ತೆರೆದ ಚರಂಡಿ ನೀರು ಬೀದಿಗಳಲ್ಲಿ ಹರಿಯುತ್ತಿದು, ಕಲುಷಿತ ಅನ್ಯೆರ್ಮಲ್ಯಕರ ವಾತಾವರಣ ಉಂಟಾಗಿರುವುದರಿಂದ ಕೂಡಲೇ ನಗರದ ಎಲ್ಲಾ ಮನೆಗಳಿಗೆ ಒಳಚರಂಡಿ ಸಂಪರ್ಕ ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗುವುದೇ? | ನಗರದ ಎಲ್ಲಾ ಮನೆಗಳಿಗೆ ಒಳಚರಂಡಿ ಗೃಹ ಸಂಪರ್ಕವನ್ನು ಡಿಸೆಂಬರ್-2021ರೊಳಗೆ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ.<br><br>ಬಾಕಿ ಇರುವ ಎಲ್ಲಾ ಮನೆಗಳಿಗೆ ಒಳಚರಂಡಿ ಸಂಪರ್ಕ ಕಲ್ಪಿಸುವ ಕಾಮಗಾರಿಯು ಪೂರ್ಣಗೊಂಡಲ್ಲಿ ತೆರದ ಚರಂಡಿಯ ಮೂಲಕ ಹರಿಯುತ್ತಿರುವ ಕಲುಷಿತ ನೀರನ್ನು ಸಂಪೂರ್ಣವಾಗಿ ತಪ್ಪಿಸಲಾಗುತ್ತದೆ. |

ಕಡತ ಸಂಖ್ಯೆ:ನಅಇ 61 ಪಿ.ಆರ್.ಜೆ 2021

(ಎನ್.ನಾಗರಾಜ್, ಎಂ.ಟಿ.ಬಿ)
ಪೌರಾಡಳಿತ ಹಾಗೂ ಸಕ್ಕರೆ ಸಚಿವರು